ಶ್ರೀ ಬಿ. ಎಸ್. ಬೋರಣ್ಣಗೌಡ,—ಅಂಥ ಪ್ರದೇಶಗಳಲ್ಲದೆ, ಕಾಫಿನಲ್ಲಿ ಜಮೀನು ಕೋಡುವುದಕ್ಕೇನು ತೊಂದರೆ ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥ ಸನ್ನಿವೇಶಗಳನ್ನು ನನ್ನ ಗಮನಕ್ಕೆ ತಂದರೆ ನಾನು ಜಮೀನು ಕೊಡುವುದಕ್ಕೆ ತಿಳುವಳಿಕೆಯನ್ನು ಕೊಡುತ್ತೇನೆ.

Sri J. MOHAMED IMAM.—Who prepares the list of these political sufferers ?

Sri KADIDAL MANJAPPA.—It is prepared on the basis of applications.

Sri J. MOHAMED IMAM.—Who determines whether a person is a political sufferer or not ?

Sri KADIDAL MANJAPPA.—It is the Government. The local officers do that.

Sri J. MOHAMED IMAM.—What are the qualifications of a political sufferer ?

Sri KADIDAL MANJAPPA.—Qualifications are laid down in the Government order which has been issued in that behalf.

Sri J. MOHAMED IMAM.—Cannot the Minister enlighten me and tell me some of the qualifications ?

Sri KADIDAL MANJAPPA.—He must be a poor man; he must have undergone suffering; he must have lost much on account of his participation in the freedom struggle.

Sri J. MOHAMED IMAM.—Who is the authority to find out whether he has suffered mentally or physically or whether he has lost any property ?

Sri KADIDAL MANJAPPA.—It is the local officer of the Government, as I have already said.

ಶ್ರೀ ಜೆ. ಮಹಮ್ಮದ್ ಇಮಾಂ.—ಈ ಹೊಳೆಕೆರೆಯಲ್ಲಿರುವ ಡಿ. ರಂಗಪ್ಪ ಮತ್ತು ಜೆ. ಎಸ್. ಕರಿಬಸಪ್ಪ ಇವರುಗಳು ಯಾವ ರೀತಿ ಸಫರ್ ಮಾಡಿದ್ದಾರೆ ಎಂಬುದನ್ನು ಹೇಳಬಲ್ಲರಾ ?

ಶ್ರೀ ಕಡಿದಾಳ್ ಮಂಜಪ್ಪ.—ಡಿ. ರಂಗಪ್ಪ ಮತ್ತು ಜೆ. ಎಸ್. ಕರಿಬಸಪ್ಪ ಇವರಿಬ್ಬರೂ ನನ್ನ ಜೊತೆಯಲ್ಲೇ ಒಂದು ವರ್ಷಕಾಲ ಜೈಲನ್ನು ಅನುಭವಿಸುತ್ತಿದ್ದಂತೆ ನನಗೆ ನೆನಪಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಅವರು ಯಾವ ರೀತಿ ಸಫರ್ ಮಾಡಿದರು ? ಏನು ಅವರಿಗೆ ಸರಿಯಾಗಿ ಊಟಕ್ಕೆ ಕೊಡಲಲ್ಲವೇ ? ಅಥವಾ ಸೇದುವುದಕ್ಕೆ ಅವರಿಗೆ ಬೀಡಿ, ಸಿಗರೇಟುಗಳನ್ನು ಕೊಡಲಲ್ಲವೆ, ಹೇಗೆ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರಿಗೆ ಜೈಲನಲ್ಲಿದ್ದ ಅನುಭವ ಇಲ್ಲ.

Sri J. MOHAMED IMAM.—Is it not a fact that many of these so-called sufferers have gained weight after going to Jail ?

Sri KADIDAL MANJAPPA.—Certainly not. They have suffered. There are a number of persons who have suffered a lot and the Government are not in a position to help them to the extent that we are expected to help them.

Sri J. MOHAMED IMAM.—What was the loss in property incurred by these gentlemen ?

Mr. SPEAKER.—It depends upon the merit of each case.

ಶ್ರೀ ಜೆ. ಮಹಮ್ಮದ್ ಇಮಾಂ.—ಇವರಿಗೇನಾದರೂ ಉದ್ಯೋಗ ನಷ್ಟವಾಗಿದೆಯೇ ಅಥವಾ ಆಸ್ತಿಪಾಸ್ತಿ ನಷ್ಟವಾಗಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಮನೆಯಲ್ಲಲ್ಲದೇ ಇದ್ದ ಕಾರಣ ಅವರ ಆಸ್ತಿಗೆ ಸ್ವಲ್ಪ ನಷ್ಟವಾಗಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಇದು ಕಾಂಗ್ರೆಸ್ ನಲ್ಲಿರತಕ್ಕವರಿಗೆ ಮಾತ್ರ ಅನ್ವಯಿಸುತ್ತದೆಯೋ ಅಥವಾ ಬೇರೆ ಆ ರೀತಿ ಕಷ್ಟಕ್ಕೀಡಾಗಿರತಕ್ಕವರೆಲ್ಲರಿಗೂ ಅನ್ವಯಿಸುತ್ತದೆಯೋ ?

Sri KADIDAL MANJAPPA.—It depends upon the terms of the Government Order.

ನಾನು ಹೇಳುವುದಾದರೆ ಆ freedom struggle ನಲ್ಲಿ ಯಾರು ಯಾರು suffer ಮಾಡಿದ್ದಾರೋ ಅವರು ಕಾಂಗ್ರೆಸ್‌ನವರೇ ಆಗಿರಲಿ ಅಥವಾ ಮತ್ತೆ ಬೇರೆ ಯಾರೇ ಆಗಿರಲಿ ಅವರಿಗೆಲ್ಲಾ ಈ ಅನುಕೂಲಗಳನ್ನು ಕೊಡುವುದಕ್ಕೆ ಆಲೋಚನೆ ಮಾಡುತ್ತೇವೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಇಲ್ಲಿ ತೊಂದರೆ ಗೀಡಾಗಿರುವವರ ಪಟ್ಟಿ ಕೊಟ್ಟಿದೆ. ಅದನ್ನು ನೋಡಿದರೆ ಇನ್ನೂ ಎಷ್ಟೋ ಜನರಿಗೆ ಈವರೆಗೂ ಜಮೀನು ಕೊಟ್ಟಿಲ್ಲವೆಂದು ಕಾಣುತ್ತದೆ. ಅದಕ್ಕೆ ಕಾರಣವೇನು ?

ಅಧ್ಯಕ್ಷರು.—ತಮ್ಮ ಹೆಸರೂ ಅಲ್ಲಿದೆ ; ನಿಮಗೂ ಕೊಟ್ಟಿಲ್ಲ !

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ನಮಗೆ ಕೊಡದೆಯಿದ್ದರೆ ಬೇಡ. ಮಿಕ್ಕವರಿಗೇಕೆ ಕೊಟ್ಟಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಲೇ ಉತ್ತರ ಹೇಳಿದಂತೆ, ಅವರುಗಳು ಕೇಳಿದ ಜಾಗದಲ್ಲಿ ಜಮೀನು ಕೊಡುವುದಕ್ಕೆ ಸಾಧ್ಯವಿಲ್ಲ ; ಜಮೀನಿರುವ ಕಡೆಯಲ್ಲ ಅವರು ಕೇಳುವುದಿಲ್ಲ ; ಕೊಟ್ಟರೂ ತೆಗೆದುಕೊಳ್ಳುವುದಿಲ್ಲ.

Tunga Anecut.

Q.—184. Sri S. R. NAGAPPA SETTY (Shimoga).—

Will the Government be pleased to state :—

(*a*) the estimated cost for completing the Tunga anecut near Shimoga and the date of starting the work ;

(*b*) the expenditure incurred annually till now;

(*c*) how many times the estimates have been revised;

(*d*) the amount of work executed by Government under amani system;

(*e*) the amount spent on labour and the amount spent on purchase of materials till now;

(*f*) the amount that has been spent out of the estimated amount for the anecut and the balance to be spent;

(*g*) the length of the right and left side channels excavated;

(*h*) the number of acres of wet land on the left side that will be irrigated and the number of acres of dry land that will be converted into wet;

(*i*) the number of acres of wet lands on the right side ready to receive water supply and the number of acres of dry land that will be converted into wet;

(*j*) the amount that will be required to continue and complete the channels according to the estimate and the cost per mile of the channel on the right side and that on the left?

A.—Sri KADIDAL MANJAPPA (Minister for Revenue and Public Works).—

(*a*) The estimated cost for completing the works is Rs. 250 lakhs. The work was started in June 1946.

		Rs.
(*b*)	1946-47 ..	7,12,914
	1947-48 ..	11,72,310
	1948-49 ..	10,15,408
	1949-50 ..	9,57,088
	1950-51 ..	15,32,846
	1951-52 ..	22,22,241
	1952-53 ..	25,44,868
	Total ..	1,01,57,675

(*c*) Once.

(*d*) To the extent of about Rs. 12 lakhs.

(*e*) Approximate amount spent on labour is Rs. 25 lakhs and amount spent for materials is about 59 lakhs.

(*f*) The amount spent on the anecut alone up to 1st July 1953 is 42.38 lakhs and the balance to be spent is Rs. 18.07 lakhs.

(*g*) Right side channel—6 miles.
Lef side channels—20 miles.

(*h*) About 1,835 acres of wet land will be irrigated and 2,537 acres of dry land will be converted into wet in the 1st stage.

(*i*) About 460 acres of wet land, ready to receive water and 617 acres of dry land that will be converted into wet.

(*j*) About 1.0 crore is necessary to complete the remaining length of channel on both the sides of the anicut. Preparation of the estimate for the 2nd stage, *i.e.*, for completing the channels is to be taken up now in view of the grant allotted for this.

The average cost per mile inclusive of all charges will be about Rs. 75,000 on the right and Rs. 2 lakhs on the left.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅಮಾನಿಯಾಗಿ ಕೆಲಸ ಮಾಡಿಸುವುದರಿಂದ ಸರ್ಕಾರದವರಿಗೆ ಹಣ ಉಳಿತಾಯವಾಗುವುದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹಣವೂ ಉಳಿತಾಯವಾಗುತ್ತದೆ, ಮತ್ತು ಕೆಲಸವೂ ತೃಪ್ತಿಕರವಾಗಿ ಆಗುತ್ತದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಮೊದಲು ಈ ಕೆಲಸಕ್ಕೆ ಎಸ್ಟಿಮೇಟು ಎಷ್ಟಕ್ಕಾಗಿತ್ತು?

ಶ್ರೀ ಕಡಿದಾಳ್ ಮಂಜಪ್ಪ.—70 ಲಕ್ಷ ರೂಪಾಯಿಗಳಿಗೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—70 ಲಕ್ಷ ರೂಪಾಯಿಗಳಿಂದ 250 ಲಕ್ಷ ರೂಪಾಯಿಗಳಿಗೆ ಹೆಚ್ಚಾದುದುಹೇಗೆ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗಲ್ಲ; first ಸ್ಟೇಜಿಗೆ ರಿವೈಸ್ಡ್ ಎಸ್ಟಿಮೇಟು 1,51,37,000 ರೂಪಾಯಿಗಳಿಗೆ ಆಗಿತ್ತು. ಆ ರಿವೈಸ್ಡ್ ಎಸ್ಟಿಮೇಟು ಸ್ಯಾಂಕ್ಷನ್ ಆಗಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ರಿವೈಸ್ಡ್ ಎಸ್ಟಿಮೇಟನ್ನು ಯಾರು ತಯಾರು ಮಾಡಿದರು; ಅವರು ಕೆಲಸದಲ್ಲಿ ಅಲ್ಲಿಯೇ ಇದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಹೇಳುವುದಕ್ಕಾಗುವುದಿಲ್ಲ; ಕೆಲವರು ಹೋಗುತ್ತಾರೆ, ಮತ್ತೆ ಬರುತ್ತಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಅಣೆಕಟ್ಟಿನ ಕೆಲಸಕ್ಕೆ 42.38 ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿ 18 ಲಕ್ಷ ರೂಪಾಯಿಗಳು ಉಳಿತಾಯವಾಗಿದೆಯೆಂದು ಹೇಳಿದ್ದೀರಿ. ಇದಕ್ಕೆ ಎಸ್ಟಿಮೇಟನ್ನು ಮೊದಲು ಬೇರೆಯವರು ಮಾಡಿದ್ದರು. ಈಗ ಬೇರೆಯವರು ಬಂದದ್ದರಿಂದ ಉಳಿತಾಯವಾಯಿತೆ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಗೊತ್ತಿಲ್ಲ ಒಟ್ಟಿನಲ್ಲಿ ಉಳಿತಾಯ ವಾಗುತ್ತಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಉಳಿತಾಯವಾದ ಹಣವನ್ನು ಅಣೆ ಕಟ್ಟೆಗೇ ಉಪಯೋಗಿಸುತ್ತೀರೋ ಅಥವಾ ಬೇರೆ ಕೆಲಸಕ್ಕೆ ಉಪಯೋಗಿಸುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಅಣೆ ಕಟ್ಟೆಗೆ ಬೇಕಾದರೆ ಅಣೆ ಕಟ್ಟೆಗೆ ಉಪಯೋಗಿಸುತ್ತೇವೆ ; ಇಲ್ಲದಿದ್ದರೆ ಬೇರೆ ಕೆಲಸಕ್ಕೆ ಉಪಯೋಗಿಸುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಎಡಗಡೆ ಭಾಗದಲ್ಲಿ ಎಷ್ಟು ಎಕರೆ ತರೀ ಜಮೀನು ಸಾಗುವಳಿಯಾಗುತ್ತದೆ ; ಎಷ್ಟು ಎಕರೆ ಖುಷ್ಕಿ ಜಮೀನು ಸಾಗುವಳಿಯಾಗುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಆಗಿರುವುದನ್ನು ಹೇಳಿದ್ದೇನೆ. ಇನ್ನೂ ಆಗಬೇಕಾದದ್ದನ್ನೂ ಸೇರಿಸಿ 21,300 ಎಕರೆಗಳಾಗುತ್ತವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಎಡಗಡೆ ಭಾಗದಲ್ಲಿ ಎಷ್ಟು, ಬಲಗಡೆ ಭಾಗದಲ್ಲಿ ಎಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—ಎಡಗಡೆ ನಾಲೆ 63 ಮೈಲಿ ಹೋಗುತ್ತದೆ ; ಸುಮಾರು 16,500 ಎಕರೆ ಸಾಗುವಳಿ ಯಾಗುತ್ತದೆ ; ಬಲದಡದ ನಾಲೆ 32 ಮೈಲಿ ಹೋಗುತ್ತದೆ. ಸುಮಾರು 5000 ಎಕರೆ ಸಾಗುವಳಿ ಯಾಗಬಹುದೆಂಬ ನಿರೀಕ್ಷೆಯಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಬಾಕಿ ಉಳಿದಿರುವ ಧಾನಲ್ ಅಣೆಕಟ್ಟಿನ ಭಾಗವನ್ನು ಈ ವರ್ಷವೇ ಸಂಪೂರ್ಣವಾಗಿ ಮುಗಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷ 34 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಇಷ್ಟು ಹಣ ಸಾಕಾಗುತ್ತದೆಂದು ನಾನು ನಂಬುವುದಿಲ್ಲ. ಉಳಿದಿದ್ದನ್ನು ಹಣವದಗಿದರೆ ಮುಂದಿನ ವರ್ಷ, ಇಲ್ಲದಿದ್ದರೆ ಅದರ ಮುಂದಿನ ವರ್ಷ ಪೂರೈಸುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಶಿವಮೊಗ್ಗ ಮತ್ತು ಹೊನ್ನಾಳಿ ತಾಲ್ಲೂಕುಗಳಲ್ಲಿ ಮಳೆ ಬಾರದಿರುವುದರಿಂದ ಈ ಧಾನಲ್ ಕೆಲಸವನ್ನು ಕೈಕೊಂಡು ರೈತರಿಗೆ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೇ ಯೋಚನೆ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದವರು ರಿಲೀಫ್ ಕಾಮಗಾರಿಗಳಿಗೆಂದು ಹಣಕೊಡುವುದಾಗಿ ಹೇಳಿದ್ದಾರೆ; ಅದನ್ನು ಕೊಡುವುದಾದರೆ ಹೊನ್ನಾಳಿ ತಾಲ್ಲೂಕಿನ ಕ್ಷಾಮ ಪ್ರದೇಶದಲ್ಲೂ ಧಾನಲ್ ಕೆಲಸವನ್ನು ಕೈಕೊಳ್ಳಬೇಕೆಂದು ಮಾಡಿದ್ದೇವೆ.

Efficiency Audit of Kanakapura Municipality.

Q.—198. Sri K. G. THIMME GOWDA (Kanakapura).—

Will the Government be pleased to state :—

(*a*) whether it is a fact that an efficiency audit took place with regard to Kanakapura Municipality ;

(*b*) if so, what are the findings of the efficiency audit ;

(*c*) the action taken with regard to such persons, if any, who have misused Municipal funds ?

A.—Sri KADIDAL MANJAPPA (Minister for Revenue and Public Works).—

(*a*) In the light of the audit of the accounts of the Municipality conducted by the State Accounts Department, the Efficiency Audit Branch was required to investigate into the affairs of the Municipality.

(*b*) No final orders are passed on the report as yet.

(*c*) The report of the Efficiency Audit Branch is under the consideration of Government.

ಶ್ರೀ ಕೆ. ಜಿ. ತಿಮ್ಮೇಗೌಡ.—ನನ್ನ (ಬ) ಪ್ರಶ್ನೆಯಲ್ಲಿ "if so, what are the findings of the efficiency audit" ಎಂದು ಕೇಳಿದ್ದೇನೆ. ಇದಕ್ಕೆ ಉತ್ತರವಾಗಿ "No final orders are passed on the report as yet" ಎಂದು ಹೇಳಿದರೆ, ಇದರ ಅರ್ಥವೇನು ?

Sri KADIDAL MANJAPPA.—It is not usual to disclose the report of the Efficiency Audit before a final order is passed. He has sent his report. It is under the consideration of Government.

ಶ್ರೀ ಕೆ. ಜಿ. ತಿಮ್ಮೇಗೌಡ.—Efficiency Audit ಮಾಡಿದ್ದರಲ್ಲಿ ಕೆಲವರ ಮೇಲೆ ಆಪಾದನೆಗಳು ಬಂದಿದ್ದರೆ ಅವರುಗಳ ಮೇಲೆ ಸರ್ಕಾರದವರು ಜಾಗ್ರತೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಜಾಗ್ರತೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ.

ಶ್ರೀ ಕೆ. ಜಿ. ತಿಮ್ಮೇಗೌಡ.—ಎಫಿಷಿಯನ್ಸಿ ಆಡಿಟ್ಟಿನವರ ವರದಿಯನ್ನು ಈ ನಡೆಯ ಮುಂದೆ ಇಡುವುದಕ್ಕಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಿ ಆರ್ಡರ್ ಆದಮೇಲೆ ಅದನ್ನು ಯೋಚನೆ ಮಾಡಬೇಕು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಎಫಿಷಿಯನ್ಸಿ ಆಡಿಟ್ಟನ್ನು ಮಾಡಿದ್ದು ಯಾವಾಗ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷ ಆಯಿತು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ವರ್ಷವೆಂದ್ರೆ ಸರ್ಕಾರದವರ ಪರ್ಯಾಲೋಚನೆಯಲ್ಲಿದ್ದು ಇನ್ನೂ ಆಖೈರ್ ಆರ್ಡರ್ ಆಗಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. ಅವರ ರಿಪೋರ್ಟು ಬಂದದ್ದು ಮೊನ್ನೆ, ಮೇ ತಿಂಗಳಲ್ಲಿ.